# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು-ಮಡಿಕೇರಿ

## SPL.C(Corruption) No. 61/2016

| | | | |
|---|---|---|---|
| ಸಾಕ್ಷಿದಾರರ ಹೆಸರು | : | **ಶ್ರೀ ಸೂರ್ಯಪ್ರಕಾಶ್ ಎಸ್.ವಿ.** | **PW - 18** |
| ತಂದೆಯ ಹೆಸರು | : | **ಎಸ್ ಆರ್ ವಿಶ್ವೇಶ್ವರ ಶಾಸ್ತ್ರಿ** | **CW - 52** |
| ವಯಸ್ಸು | : | **51 ವರ್ಷ** | |
| ವೃತ್ತಿ | : | **ಉಪನಿರ್ದೇಶಕರು, ಆರ್ಥಿಕ ಮತ್ತು ಸಾಂಕಿಕ ನಿರ್ದೇಶನಾಲಯ, ಬೆಂಗಳೂರು** | |
| ವಾಸ | : | **ಬೆಂಗಳೂರು** | |

**ಸಾಕ್ಷಿಯನ್ನು ದಿನಾಂಕ 13-09-2024 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯವಿಚಾರಣೆ: ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

1. ನಾನು 2007 ರಿಂದ 2016 ರವರೆಗೆ ಕರ್ನಾಟಕ ಲೋಕಾಯುಕ್ತ ಕೇಂದ್ರ ಕಛೇರಿ ಬೆಂಗಳೂರಿನಲ್ಲಿ ಸಹಾಯಕ ಸಾಂಕಿಕ ಅಧಿಕಾರಿಯಾಗಿ ಕೆಲಸ ಮಾಡಿರುತ್ತೇನೆ.

2. Crime No.4/2013 ನಲ್ಲಿ ಲೋಕಾಯುಕ್ತ ಎಸ್.ಪಿ., ಮೈಸೂರು ರವರಿಂದ ದಿನಾಂಕ 08.10.1990 ರಿಂದ 24.05.2013 ರವರೆಗೆ ಆರೋಪಿತನ ಕೌಟುಂಬಿಕ ವೆಚ್ಚದ ಅಂದಾಜು ಮಾಹಿತಿಯನ್ನು ಒದಗಿಸಲು ಕೋರಿದ್ದರು, ನಾನು ಆರೋಪಿತನ ಕೌಟುಂಬಿಕ ವೆಚ್ಚದ ಅಂದಾಜು ಮಾಹಿತಿಯನ್ನು ಲೋಕಾಯುಕ್ತ ಎಸ್.ಪಿ., ಮೈಸೂರು ರವರಿಗೆ ಕಳುಹಿಸಿರುತ್ತೇನೆ. ಸಾಕ್ಷಿ Covering letter by the witness, Report, Invisible list of Household items, Visible Household items and Working sheet showing the year wise expenditure ಒಟ್ಟಾಗಿ ಸೇರಿ ನಿಪಿ-**213** ಎಂದು ಗುರುತಿಸಲಾಯಿತು. Covering letter ಮೇಲಿರುವ ಸಾಕ್ಷಿ ಸಹಿಯನ್ನು ನಿಪಿ-**213(ಎ)**, Report ಮೇಲಿರುವ ಸಾಕ್ಷಿ ಸಹಿಯನ್ನು ನಿಪಿ-**213(ಬಿ)** ಎಂದು ಗುರುತಿಸಲಾಯಿತು.

**ಪಾಟೀಸವಾಲು- ಆರೋಪಿ ಪರ ವಕೀಲರಾದ ಶ್ರೀ. ಪಿ.ಕೆ.ಎಸ್. ರವರಿಂದ:**

1. ನಾನು ಲೋಕಾಯುಕ್ತ ಪೊಲೀಸರು ಕೊಟ್ಟ ಮಾಹಿತಿ ಮೇಲೆ ವರದಿಯನ್ನು ತಯಾರಿಸಿರುತ್ತೇನೆ. ಖರ್ಚಿಗೆ ಸಂಬಂಧಪಟ್ಟಂತೆ ನಾವು ಅಂದಾಜು ವೆಚ್ಚ ತೋರಿಸುವಾಗ ಚಿಕ್ಕ ಮಕ್ಕಳು ಮತ್ತು ವಯಸ್ಕರ ಖರ್ಚು ಒಂದೇ ರೀತಿ ತೆಗೆದುಕೊಳ್ಳುತ್ತೇವೆ ಎಂದರೆ ಸರಿ ಇದೆ. General Family Income and Expenditure survey 2009 report of Karnataka ಅದನ್ನು ಆಧರಿಸಿ per capita monthly expenditure ನ್ನು ನಿರ್ಧರಿಸಿರುತ್ತೇವೆ. ನಾವು Expenditure ನ್ನು ಆದಾಯದ ಮೇಲೆ ನಿರ್ಧರಿಸಿರುತ್ತೇವೆ. ಅದೇ ರೀತಿ ಸದರಿ ವ್ಯಕ್ತಿ ಗ್ರಾಮೀಣ ಅಥವಾ ನಗರದಲ್ಲಿ ವಾಸಿಸುವ ಸ್ಥಳದ ಆಧಾರದ ಮೇಲೆ ನಿರ್ದರಿಸಿರುತ್ತೇವೆ. ಆರೋಪಿತನು ಯಾವ ಯಾವ ವರ್ಷದಲ್ಲಿ ಯಾವ ಯಾವ ಸ್ಥಳದಲ್ಲಿ ಸೇವೆ ಸಲ್ಲಿಸಿದ್ದನು ಎಂದು ಲೋಕಾಯುಕ್ತ ಪೊಲೀಸರು ನನಗೆ ಮಾಹಿತಿ ಕೊಟ್ಟಿರುತ್ತಾರೆ. ಅದೇ ರೀತಿ ಆ ಸಂದರ್ಭದಲ್ಲಿ ಆತನ ಕುಟುಂಬದವರು ಆತನ ಜೊತೆ ವಾಸ ಮಾಡುತ್ತಿದ್ದರೋ ಅಥವಾ ಇಲ್ಲವೊ ಎಂಬುದರ ಬಗ್ಗೆ ಮಾಹಿತಿ ಕೊಟ್ಟಿರುತ್ತಾರೆ. List of Invisible/Non verifiable Household items ನಾನು ತೋರಿಸಿದ list ನಲ್ಲಿ survey ಆಧಾರದ ಮೇಲೆ ಸದರಿ Items ಗಳನ್ನು ತೋರಿಸಿರುತ್ತೇನೆ. ಆರೋಪಿತನು ಸದರಿ ವಸ್ತುಗಳನ್ನು ಬಳಸುತ್ತಿದ್ದನು ಅಥವಾ ಇಲ್ಲ ಎಂಬುದು ನನಗೆ ಮಾಹಿತಿ ಇಲ್ಲ. ಒಬ್ಬ ಸರ್ಕಾರಿ ಅಧಿಕಾರಿ ನಾನು ತೋರಿಸಿದ ವೆಚ್ಚಕ್ಕಿಂತ ಕಡಿಮೆ ಖರ್ಚಿನಲ್ಲಿ ಜೀವನ ಮಾಡಬಹುದು ಎಂದರೆ ನನಗೆ ಹೇಳಲು ಆಗುವುದಿಲ್ಲ ಎಂದು ಹೇಳುತ್ತಾರೆ. ನಾನು ನನ್ನ ವರದಿಯನ್ನು All India Consumer Prize Index (ಅಖಿಲ ಭಾರತ ಗ್ರಾಹಕ ಬೆಲೆ ಸೂಚ್ಯಾಂಕ) ದ ಆಧಾರದ ಮೇಲೆ ತಯಾರಿಸಿರುತ್ತೇನೆ. ಆರೋಪಿತನ ಮನೆಯಲ್ಲಿ ಯಾರೂ ಮದ್ಯಪಾನ ಮಾಡುವುದಿಲ್ಲ ಎಂದು ನನಗೆ ಮಾಹಿತಿ ಇತ್ತು ಎಂದರೆ ಸರಿ ಇದೆ. ಆರೋಪಿತನ ಮನೆಯಲ್ಲಿ ಕುಟುಂಬಸ್ಥರು 79,918/- ರೂ Beverages ಸಲುವಾಗಿ ಖರ್ಚು ಮಾಡಿದ್ದಾರೆ ಎಂದು ನಾನು ತೋರಿಸಿರುವುದು ಸುಳ್ಳು ಇದೆ ಎಂದರೆ ಸರಿಯಲ್ಲ. ನಾನು ಲೋಕಾಯುಕ್ತ ಸಂಸ್ಥೆಯಲ್ಲಿ ಕೆಲಸ ಮಾಡಿದ್ದರಿಂದ ಲೋಕಾಯುಕ್ತ ಪೊಲೀಸರಿಗೆ ಅನುಕೂಲ ಆಗಲಿ ಎಂದು ಸುಳ್ಳು ವರದಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನಾನು ಆರೋಪಿಯ ಖರ್ಚನ್ನು ಹೆಚ್ಚಿಗೆ ತೋರಿಸಿದ್ದೇನೆ ಎಂದರೆ ಸರಿಯಲ್ಲ. ಲೆಕ್ಕಾ ಚಾರಕ್ಕೆ ಬೇಕಾದ ಎಲ್ಲಾ ಮಾಹಿತಿಯನ್ನು ನಾನು ತನಿಖಾಧಿಕಾರಿಯಿಂದ ಪಡೆದುಕೊಂಡಿಲ್ಲ ಎಂದರೆ

ಸರಿಯಲ್ಲ.

<u>**ಮರುವಿಚಾರಣೆಃ**</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ.